# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 899 (913) |
| ಸದಸ್ಯರ ಹೆಸರು | ಡಾ|| ಯತೀಂದ್ರ ಎಸ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 15-12-2025 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವರುಣಾ ಗ್ರಾಮದಲ್ಲಿ ಹೊಸ ಪ್ರಥಮ ದರ್ಜೆ ಕಾಲೇಜು ತೆರೆಯುವ ಬಗ್ಗೆ ತಾತ್ವಿಕ ಅನುಮೋದನೆ ದೊರೆತಿದೆಯೇ; ಕಾಲೇಜು ಸ್ಥಾಪನೆಗೆ ಅಗತ್ಯವಿರುವ ಒಟ್ಟು ಬಜೆಟ್ ಎಷ್ಟು ಮತ್ತು 2025-26ರ ಆರ್ಥಿಕ ವರ್ಷದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ; (ವಿವರ ಒದಗಿಸುವುದು)</td><td>ವರುಣಾ ಗ್ರಾಮದಲ್ಲಿ ಹೊಸ ಪ್ರಥಮ ದರ್ಜೆ ಕಾಲೇಜು ತೆರೆಯುವ ಬಗ್ಗೆ ತಾತ್ವಿಕ ಅನುಮೋದನೆ ನೀಡಿರುವುದಿಲ್ಲ.<br><br>ಉನ್ನತ ಶಿಕ್ಷಣ ಇಲಾಖೆಗೆ ಆಯವ್ಯಯದಲ್ಲಿ ಒದಗಿಸುತ್ತಿರುವ ಅನುದಾನದಲ್ಲಿ ಅಭಿವೃದ್ಧಿಗಾಗಿ ಸೀಮಿತ ಅನುದಾನ ಲಭ್ಯವಿರುತ್ತದೆ. ಸದರಿ ಅನುದಾನದಲ್ಲಿ ಪ್ರಸ್ತುತ ಇರುವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಬಲವರ್ಧನೆಗೊಳಿಸಲಾಗುತ್ತಿದೆ.</td></tr>
<tr><td>ಆ)</td><td>ಕಾಲೇಜು ನಿರ್ಮಾಣಕ್ಕಾಗಿ ಸೂಕ್ತವಾದ ಸ್ಥಳವನ್ನು ಗುರುತಿಸಲಾಗಿದೆಯೇ; ಕಟ್ಟಡ ನಿರ್ಮಾಣ, ತರಗತಿ ಕೊಠಡಿಗಳು, ಪ್ರಯೋಗಾಲಯಗಳು, ಗ್ರಂಥಾಲಯ ಮತ್ತು ಕ್ರೀಡಾ ಸೌಲಭ್ಯಗಳಂತಹ ಮೂಲಸೌಕರ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದೆಯೇ; (ವಿವರ ಒದಗಿಸುವುದು)</td><td rowspan="2">ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ.<br><br>ವರುಣಾ ಗ್ರಾಮದ ಸುತ್ತಮುತ್ತ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ವಿವರ ಕೆಳಕಂಡಂತಿದೆ:<br>
<table>
<tr><th>ಕ್ರ. ಸಂ</th><th>ಕಾಲೇಜಿನ ಹೆಸರು</th><th>ವಿದ್ಯಾರ್ಥಿಗಳ ಸಂಖ್ಯೆ</th><th>ಅಂತರ (ಕಿ.ಮೀ ಗಳಲ್ಲಿ)</th></tr>
<tr><td colspan="4">ಸರ್ಕಾರಿ ಪ್ರಥಮ ದರ್ಜೆ ಕಾಲೇಜು</td></tr>
<tr><td>1</td><td>ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.</td><td>2838</td><td>20</td></tr>
<tr><td>2</td><td>ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.</td><td>2616</td><td>20</td></tr>
<tr><td>3</td><td>ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಮೈಸೂರು.</td><td>3529</td><td>25</td></tr>
<tr><td>4</td><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು</td><td>1491</td><td>19.7</td></tr>
<tr><td>5</td><td>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥನಗರ, ಮೈಸೂರು</td><td>1536</td><td>8.9</td></tr>
<tr><td colspan="4">ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜು</td></tr>
<tr><td>6</td><td>ಶಾರದ ವಿಲಾಸ ಕಾಲೇಜು, ಮೈಸೂರು</td><td>134</td><td>13.9</td></tr>
<tr><td>7</td><td>ಸೇಂಟ್. ಫಿಲೋಮಿನ ಕಾಲೇಜು, ಮೈಸೂರು</td><td>1532</td><td>15.5</td></tr>
<tr><td>8</td><td>ಜೆ.ಎಸ್.ಎಸ್ ಕಾಲೇಜು, ಸರಸ್ವತಿಪುರಂ, ಮೈಸೂರು</td><td>1623</td><td>14.4</td></tr>
</table>
ಮೇಲ್ಕಂಡ ಕಾಲೇಜುಗಳಲ್ಲಿ ವರುಣಾ ಗ್ರಾಮದ ವಿದ್ಯಾರ್ಥಿಗಳು ವ್ಯಾಸಂಗ ಮಾಡಬಹುದಾಗಿದೆ.</td></tr>
<tr><td>(ಇ)</td><td>ಹೊಸ ಕಾಲೇಜಿನಲ್ಲಿ ಯಾವ ವಿಷಯಗಳಲ್ಲಿ ಪದವಿ ಕೋರ್ಸ್‌ಗಳನ್ನು (ಉದಾಹರಣೆಗೆ:- ಕಲೆ, ವಾಣಿಜ್ಯ, ವಿಜ್ಞಾನ) ಪ್ರಾರಂಭಿಸಲು ಯೋಜಿಸಲಾಗಿದೆ?(ವಿವರ ಒದಗಿಸುವುದು)</td></tr>
</table>

ಕಡತ ಸಂಖ್ಯೆ: ಇಡಿ 137 ಹೆಚ್‌ಪಿಸಿ 2025

(ಡಾ|| ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು